ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 06.12.2024.

**ಪಾಟೀ ಸವಾಲುಃ** ಪ್ರತಿವಾದಿ ಪರ ವಕೀಲರಿಂದಃ

ನನ್ನ ಮದುವೆ 2013 ಜನೆವರಿ 31 ರಂದು ಆಗಿರುತ್ತದೆ. ಮದುವೆ ಕಾಲಕ್ಕೆ ಪ್ರತಿವಾದಿ ನನಗೆ 4 ತೊಲಾ ಬಂಗಾರದ ಲಾಕೇಟ್ ಮತ್ತು 2 ಉಂಗುರುಗಳನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2 ತೊಲಾ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಗಂಡ ಮೋಟಾರ್ ವೈಂಡಿಗ್

ಕೆಲಸ ಮಾಡುತ್ತಾರೆ ಎಂದರೆ ಸರಿ. ನನ್ನ ಗಂಡ ಮೋಟಾರ್ ವೈಂಡಿಗ್ ಕೆಲಸವನ್ನು ಮೊದಲು ಸ್ವಂತವಾಗಿ ಮಾಡುತ್ತಿದ್ದರು, ಈಗ ನಾವೇ ಸ್ವಂತವಾಗಿ ಅಂಗಡಿ ಹಾಕಬೇಕೆಂದು ಯೋಜನೆ ಹೊಂದಿದ್ದರು ಎಂದರೆ ಸರಿಯಲ್ಲ. ಸದರಿ ಅಂಗಡಿ ಹಾಕುವ ಸಲುವಾಗಿ ನನ್ನ ಗಂಡ ಪ್ರತಿವಾಯಿಂದ ರೂ.5 ಲಕ್ಷ ಹಣವನ್ನು ಹಾಗೂ ಬೇರೆಯವರ ಹತ್ತಿರ ರೂ.2 ಲಕ್ಷ ಹಣವನ್ನು ತೆಗೆದುಕೊಂಡು ನನ್ನ ಗಂಡನಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ನಾವು ಅಂಗಡಿ ಹಾಕಬೇಕೆಂಬ ಉದ್ದೇಶ ಹೊಂದಿದ್ದೇವೆ ಆ ಮದ್ಯ ನನ್ನ ಗಂಡನಿಗೆ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ.

ನನ್ನ ಮಾವ ಕೊಟ್ಟ ರೂ.7 ಲಕ್ಷ ಕೂಡಾ ನನ್ನ ಹತ್ತಿರ ಇರುತ್ತವೆ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಗಂಡನ ಹೆಸರಿನಲ್ಲಿ ಎಲ್ಐಸಿ ವಿಮೆ ಇದೆ ಎಂದರೆ ಸರಿಯಲ್ಲ. ಅಲ್ಲದೇ ಎಲ್ಐಸಿಯಿಂದ ರೂ.8 ಲಕ್ಷ ಹಣ ನನಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಕೆ.ಜಿ.ಬಿ. ಚಿಂಚನಸೂರು ಬ್ಯಾಂಕಿನಿಂದ ಭಾಗ್ಯಲಕ್ಷ್ಮಿ ಹಣ ಅಂತ ರೂ.80,000/- ನನ್ನ ಅಕೌಂಟಿಗೆ ಜಮೆಯಾಗಿದೆ ಎಂದರೆ ಸರಿಯಲ್ಲ. ನನ್ನ ಇಬ್ಬರು ಮಕ್ಕಳ ಶಾಲಾ ಖರ್ಚು ವೆಚ್ಚಗಳನ್ನು ಹಾಗೂ ನನ್ನ ಕುಟುಂಬದ ವೆಚ್ಚವನ್ನು ಕೂಡಾ ಪ್ರತಿವಾದಿಯೇ ಭರಿಸುತ್ತಿದ್ದಾನೆ ಎಂದರೆ ಸರಿಯಲ್ಲ. ನನ್ನ ತಮ್ಮ ಏಕನಾಥ ರವರಿಗೆ ಸರ್ಕಾರಿ ನೌಕರಿ ಕೊಡಿಸುವ ಸಲುವಾಗಿ ಪ್ರತಿವಾದಿಯಿಂದ ಆತ ರೂ.1 ಲಕ್ಷ ಹಣವನ್ನು ಪಡೆದುಕೊಂಡಿರುತ್ತಾನೆ ಎಂದರೆ ಸರಿಯಲ್ಲ.

ಪ್ರತಿವಾದಿಗೆ ಇಬ್ಬರು ಗಂಡು ಮಕ್ಕಳು, ಹಾಗೂ ಮೂರು ಜನ ಹೆಣ್ಣು ಮಕ್ಕಳು ಇರುತ್ತಾರೆ, ಅವರೇಂದೆರೆ, ವಿಜಯಲಕ್ಷ್ಮಿ, ನಾಗಯ್ಯ, ಸಿದ್ದರಾಮಯ್ಯ, ಭಾಗ್ಯಲಕ್ಷ್ಮಿ ಮತ್ತು ಜಯಲಕ್ಷ್ಮಿ ಇರುತ್ತಾರೆ, ಅವರ ಪೈಕಿ ಭಾಗ್ಯಲಕ್ಷ್ಮಿ ಮತ್ತು ನನ್ನ ಗಂಡ ತಿರಿಕೊಂಡಿರುತ್ತಾರೆ. ನನ್ನ ಮಾವನ ಹೆಸರಿನಲ್ಲಿ 3 ಸರ್ವೆ ನಂಬರಗಳು ಇಲ್ಲ, ಬರಿ 2 ಸರ್ವೆ ನಂಬರಗಳು ಇರುತ್ತವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು ಅಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾವು ಇರುವ ಮನೆ ಕೂಡಾ ಪ್ರತಿವಾದಿ

ಸ್ವಂತ ಗಳಿಸಿದ ಆಸ್ತಿ ಎಂದರೆ ಸರಿಯಲ್ಲ. ಆ ಕಾರಣ ದಾವಾ ಸ್ವತ್ತುಗಳಲ್ಲಿ ನಮಗೆ ಯಾವುದೇ ಭಾಗ ಇರುವುದಿಲ್ಲ ಎಂದರೆ ಸರಿಯಲ್ಲ. ಇವತ್ತಿಗೂ ಕೂಡಾ ಪ್ರತಿವಾದಿಯೇ ನಮ್ಮ ಹಾಗು ಹೋಗುಗಳನ್ನು ನೋಡಿಕೊಳ್ಳುತ್ತಿದ್ದರೂ ಕೂಡಾ, ನಾವು ಆತನಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಈ ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**